ಕರ್ನಾಟಕ ಸರ್ಕಾರ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ**
**ಲೋಕೋಪಯೋಗಿ ಇಲಾಖೆ ನಂ.2ನೇ ಉಪ-ವಿಭಾಗ,**
**ಗುಂಡ್ಲುಪೇಟೆ**

---

ಸಂಖ್ಯೆ:ಸ.ಕಾ.ಅ.ನಂ.2.ಲೋ.ಇ.ಉ.ವಿ.ಗುಂ.ಪೆ/ಕಿ.ಇಂ-1/ಕಟ್ಟಡ ಸುರಕ್ಷತಾ/2025-26.

157
10/06/2025

ರವರಿಗೆ,
ಶ್ರೀಮತಿ ಮಂಗಳ
ಅಧ್ಯಕ್ಷರು
ಯಂಗ್‌ಸ್ಕಾಲರ್ಸ್ ಶಾಲೆ
ಚಾಮರಾಜನಗರ ರಸ್ತೆ
ಗುಂಡ್ಲುಪೇಟೆ.

ಮಾನ್ಯರೇ,

ವಿಷಯ:- ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ನೀಡುವ ಬಗ್ಗೆ.

ಉಲ್ಲೇಖ:- ತಮ್ಮ ಮನವಿ ಪತ್ರದ ದಿನಾಂಕ:- 30.05.2025.

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ತಮ್ಮ ಮನವಿ ಪತ್ರದಲ್ಲಿ ಯಂಗ್‌ಸ್ಕಾಲರ್ಸ್ ಶಾಲೆ, ಚಾಮರಾಜನಗರ ರಸ್ತೆ (ನಿವೇಶನ ಸಂಖ್ಯೆ:-150800200901802624) ವಿಜಯಪುರ ಗ್ರಾಮದಲ್ಲಿ ಇರುವ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲು ಕೋರಿರುತ್ತೀರಿ

ಅದರಂತೆ, ಕಟ್ಟಡವು ನೆಲಮಹಡಿ, ಮೊದಲನೆ ಮತ್ತು ಎರಡನೆ ಮಹಡಿಗಳನ್ನು ಒಳಗೊಂಡಂತೆ ಇರುತ್ತದೆ. ಕಟ್ಟಡವು ದಿನಾಂಕ:-04.05.2025 ರಂದು ಪೂರ್ಣಗೊಂಡಿರುತ್ತದೆ. ಸದರಿ ಕಟ್ಟಡದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ. ಮುಂದುವರೆದು ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮೂಕಹಳ್ಳಿ ಗ್ರಾಮಪಂಚಾಯಿತಿ ರವರಿಂದ ನಕ್ಷೆ ಅನುಮೋದನೆ ಪಡೆದು ಮತ್ತು ಮಹದೇವಶೆಟ್ಟಿ, ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್, ಸಿ.ಪಿ.ಕಾರಂತಿ ಬಿಲ್ಡಿಂಗ್, ಹುಲ್ಲಹಳ್ಳಿ ರೋಡ್, ನಂಜನಗೂಡು (NJD/BL/1014/2025-26) ರವರಿಂದ ಧೃಡೀಕರಣ ಮತ್ತು ಕಟ್ಟಡ ಪೂರ್ಣಗೊಂಡ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ದಿನಾಂಕ:-10.06.2025ರಂದು ಸದರಿ ಕಟ್ಟಡವನ್ನು ಪರೀಕ್ಷಿಸಲಾಗಿ ಮೇಲ್ನೋಟಕ್ಕೆ ಕಟ್ಟಡವು ಗುಣಮಟ್ಟದಿಂದ ಕೂಡಿರುವುದು ಕಂಡುಬಂದಿರುತ್ತದೆ.

ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ಪ್ರಸಕ್ತ ಶೈಕ್ಷಣಿಕ 2025-26ನೇ ಸಾಲಿಗೆ (ಒಂದು ವರ್ಷಕ್ಕೆ) 10.06.2025 ರಿಂದ ಅನ್ವಯವಾಗುವಂತೆ ಶಾಲಾ ಕಟ್ಟಡ ಸಧೃಡತೆಯ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ, ನಂ.2ನೇ ಉಪ-ವಿಭಾಗ,
ಗುಂಡ್ಲುಪೇಟೆ.